**ದಿನಾಂಕ : 04–11–2010 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ ನರ್ಮ್ ಯೋಜನೆ ಕುರಿತಾದ ಸಭೆಯ ನಡವಳಿಗಳು :**

**ಸಭೆಗೆ ಹಾಜರಿದ್ದ ಅಧಿಕಾರಿಗಳು :**

| | | | |
|---|---|---|---|
| 1. | ಸನ್ಮಾನ್ಯರಾದ ಶ್ರೀ ಎಸ್.ಎ. ರಾಮದಾಸ್ ರವರು, ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು - ಅಧ್ಯಕ್ಷರು | 11. | ಶ್ರೀಮತಿ ಪುಷ್ಪಲತಾ ಜಗನ್ನಾಥ್, ಉಪ ಮಹಾಪೌರರು, ಮೈ.ನ.ಪಾ ಮೈಸೂರು |
| 2. | ಶ್ರೀ ವಿಶ್ವನಾಥ್ ರವರು, ಲೋಕಸಭಾ ಸದಸ್ಯರು – ಸದಸ್ಯರು | 12. | ಶ್ರೀ ಮಹೇಶ್, ಅಧೀಕ್ಷಕ ಇಂಜಿನಿಯರ್, ಮೈ.ನ.ಪಾ., ಮೈಸೂರು |
| 3. | ಶ್ರೀ ತನ್ವೀರ್ ಸೇಠ್, ಮಾನ್ಯ ಶಾಸಕರು, ನರಸಿಂಹರಾಜ ಕ್ಷೇತ್ರ, ಮೈಸೂರು – ಸದಸ್ಯರು | 13. | ಶ್ರೀ ಬಿಳಿರಂಗಸ್ವಾಮಿ, ಕಾರ್ಯಪಾಲಕ ಇಂಜಿನಿಯರ್, ಕ.ಕೋ.ನಿ.ಮಂ. |
| 4. | ಶ್ರೀ ಸತೀಶ್ (ಸಂದೇಶ್ ಸ್ವಾಮಿ), ಮಾನ್ಯ ಮಹಾ ಪೌರರು, ಮೈ.ನ.ಪಾ | 14. | ಶ್ರೀ ಕಿಶೋರ್ ಕುಮಾರ್, ಕಾರ್ಯಪಾಲಕ ಇಂಜಿನಿಯರ್, ಮೈ.ನ.ಪಾ |
| 5. | ಶ್ರೀ ಹರ್ಷ ಗುಪ್ತಾ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು – ಸದಸ್ಯರು | 15. | ಶ್ರೀ ಸುಬ್ರಮಣ್ಯ, ಕಾರ್ಯಪಾಲಕ ಇಂಜಿನಿಯರ್, ವಾ.ವಿ.ನಿ.ಸ.ಕ., ಮೈಸೂರು |
| 6. | ಶ್ರೀ ಕೆ. ಎಸ್. ರಾಯ್ಕರ್, ಆಯುಕ್ತರು, ಮೈ.ನ.ಪಾ – ಸದಸ್ಯ ಕಾರ್ಯದರ್ಶಿ | 16. | ಶ್ರೀ ಸುಬ್ಬೆಗೌಡರು, ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲಯೂ.ಎಸ್.&ಡಿ.ಬಿ |
| 7. | ಶ್ರೀ ಪಿ. ಜಯಣ್ಣ, ಆಯುಕ್ತರು, ಮೈ.ನ.ಪ್ರಾ ಮೈಸೂರು – ಸದಸ್ಯರು | 17. | ಶ್ರೀ ವೀರಭದ್ರಯ್ಯ, ಕಾರ್ಯಪಾಲಕ ಇಂಜಿನಿಯರ್, ಮೈ.ನ.ಪ್ರಾ |
| **ಆಹ್ವಾನಿತರು** | | 18. | ಶ್ರೀ ಚಾಮರಾಜೇಗೌಡ, ಕಾರ್ಯಪಾಲಕ ಇಂಜಿನಿಯರ್, ಜೆಎನ್‌ನರ್ಮ್, ಮೈನಪಾ, ಮೈಸೂರು |
| **8.** | ಶ್ರೀ ಶ್ರೀನಿವಾಸ್, ವಿಭಾಗಿಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ಸಂ., ಮೈಸೂರು | 19. | ಶ್ರೀ ವಿಜಯಕುಮಾರ್, ಉಪನಿರ್ದೇಶಕರು, ಮೃಗಾಲಯ ಪ್ರಾಧಿಕಾರ |
| 9. | ಶ್ರೀ ಬಿ. ಕೆ. ಸುರೇಶ್ ಬಾಬು, ಅಧೀಕ್ಷಕ ಇಂಜಿನಿಯರ್, ನರ್ಮ್, ಮೈ.ನ.ಪಾ., ಮೈಸೂರು | 20. | ಶ್ರೀ ಎನ್. ಜಯರಾಮ್, ಸಹಾಯಕ ನಿರ್ದೇಶಕರು, ಪ್ರವಾಸೋಧ್ಯಮ ಇಲಾಖೆ, ಮೈಸೂರು |
| 10. | ಶ್ರೀ ಶಿವಕುಮಾರ್, ಅಧೀಕ್ಷಕ ಇಂಜಿನಿಯರ್, ಮೈ.ನ.ಪ್ರಾ., ಮೈಸೂರು | 21. | ಶ್ರೀಮತಿ ಝುಹಿರಾ ನಸೀಮ, ಯೋಜನಾ ನಿರ್ದೇಶಕರು, ಮೈಸೂರು |

ಪ್ರಾರಂಭದಲ್ಲಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರು ಅಧ್ಯಕ್ಷರನ್ನು ಮತ್ತು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಜೆಎನ್‌ನರ್ಮ್‌ವತಿಯಿಂದ ನಡೆಯುತ್ತಿರುವ ಎಲ್ಲಾ ಯೋಜನೆಗಳು ಯಾವ ರೀತಿ ಮತ್ತು ಜೆಎನ್‌ನರ್ಮ್ ಯೋಜನೆಯ ನೋಡಲ್ ಸಂಸ್ಥೆ ಯಾರು ಯಾರು ಎಂದು ಕೇಳಲಾಗಿ, ಪಿ.ಐ.ಯು ಮತ್ತು ಅಧೀಕ್ಷಕ ಅಭಿಯಂತರರು ಜೆಎನ್‌ನರ್ಮ್ ನೋಡಲ್ ಏಜೆನ್ಸಿಯಾಗಿ ಮಾಡುತ್ತಾರೆ ಎಂದು ಜಿಲ್ಲಾಧಿಕಾರಿಗಳು ಉತ್ತರಿಸಿದರು. ಲೋಕಸಭಾ ಸದಸ್ಯರಾದ ಸನ್ಮಾನ್ಯ ಶ್ರೀ ವಿಶ್ವನಾಥ್ ರವರು ನರ್ಮ್ ಯೋಜನೆಯ ಮಾರ್ಗಸೂಚಿಯಂತೆ ಮುಖ್ಯಸ್ಥರು ಯಾರು ಎಂಬುದರ ಬಗ್ಗೆ ಮಾತನಾಡಿ ಪೂರ್ತಿ ಕಾರ್ಯಕ್ರಮದ ಮುಖ್ಯಸರು ಮತ್ತು ಹೊಣೆಗಾರರು ನಗರ ಪಾಲಿಕೆ ಆಯುಕ್ತರು ಎಂದು ಹೇಳಿದರು. ಈ ಸಂಬಂಧ ನಗರ ಪಾಲಿಕೆ ಆಯುಕ್ತರು ಮಾತನಾಡಿ, ನರ್ಮ್ ಯೋಜನೆಯ ಮಾರ್ಗಸೂಚಿಯಂತೆ ಸ್ಥಳೀಯ ಸಂಸ್ಥೆಯೇ ಯೋಜನೆಯ ನಿರ್ವಹಣಾ ಸಂಸ್ಥೆಯಾಗಿರುತ್ತೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಯೋಜನೆಯ ವಿವಿಧ ರೀತಿಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬೇರೆ ಬೇರೆ ಇಲಾಖೆ ಇರುವುದರಿಂದ ನಗರ ಪಾಲಿಕೆ ಕೇವಲ ನೋಡಲ್ ಸಂಸ್ಥೆಯಾಗಿದ್ದು ಮತ್ತು ಕೆಲವು ಕಾಮಗಾರಿಗಳನ್ನು ಮಾತ್ರ ನೇರವಾಗಿ ಅನುಷ್ಠಾನಗೊಳಿಸುತ್ತಿದೆಯೆಂದು ತಿಳಿಸಿದರು.

ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಇವರು CDP ಬಗ್ಗೆ ವಿವರಿಸಿ, 2006 ರಲ್ಲಿ CDP ಯನ್ನು ರೂ. 1834.00 ಕೋಟಿಗಳಿಗೆ ತಯಾರಿಸಿ ಸಲ್ಲಿಸಿದ್ದು ಭಾರತ ಸರಕಾರದಿಂದ ಅನುಮೋದನೆಯಾಗಿರುತ್ತದೆ. ACA ಯನ್ನು ಒಟ್ಟು ಜನಸಂಖ್ಯೆ, ನಗರದ ಜನಸಂಖ್ಯೆ, ಹಾಗೂ BPL ಆಧಾರಿತ ಜನಸಂಖ್ಯೆಗೆ ಅನುಗುಣವಾಗಿ ACA ಯನ್ನು ನಿಗಧಿಪಡಿಸಲಾಗುತ್ತಿದೆ. ಇದರ ಆಧಾರದಂತೆ ಕರ್ನಾಟಕ ರಾಜ್ಯಕ್ಕೆ ರೂ. 1374.00 ಕೋಟಿಗಳಷ್ಟು ACA ನಿಗಧಿಯಾಗಿರುತ್ತದೆ. ಅದರಲ್ಲಿ ರೂ. 662.00 ಕೋಟಿಗಳಷ್ಟು ಬೆಂಗಳೂರು ನಗರಕ್ಕೆ ಮತ್ತು ರೂ. 685.00 ಕೊಟಿಗಳಷ್ಟು ಮೈಸೂರು ನಗರಕ್ಕೆ ಒದಗಿಸಲಾಗಿರುತ್ತದೆ. ರೂ. 685.00 ಕೋಟಿಯ ACA ನಲ್ಲಿ ಮೈಸೂರು ನಗರಕ್ಕೆ 9 UIG ಯೋಜನೆಗಳು ಅನುಮೋದನೆಗೊಂಡಿದೆ. 4 BSUP ಯೋಜನೆಗಳು ರೂ. 254.00 ಕೋಟಿಗೆ ಅನುಮೋದನೆಯಾಗಿದ್ದು, ಒಟ್ಟು ರೂ. 1330.00 ಕೋಟಿಗಳಿಗೆ ಅನುಮೋದನೆಯಾಗಿ, ACAಯನ್ನು ರೂ. 1107.00 ಕೋಟಿಗಳ ಯೋಜನೆಗೆ ನಿಗಧಿಪಡಿಸಿರುತ್ತಾರೆ ಅಲ್ಲದೇ 7 ಯೋಜನೆಗಳನ್ನು ರೂ. 524.00 ಕೋಟಿಗಳಿಗೆ ಭಾರತ ಸರಕಾರಕ್ಕೆ ಸಲ್ಲಿಸಿದ್ದು, ACA ಕೊರತೆಯಿಂದ ಅನುಮೋದನೆಯಾಗಿರುವುದಿಲ್ಲ.

ನಂತರ, ಪ್ರತಿ ಯೋಜನೆಗಳ ಬಗ್ಗೆ ಆಯಾ ನಿರ್ವಹಣೆ ಸಂಸ್ಥೆಯವರು ವಿವರಗಳನ್ನು ವಿವರಿಸಿದರು.

**1. ಮೈಸೂರಿನ ನೀರು ವಿತರಣಾ ಜಾಲವನ್ನು ಅಭಿವೃದ್ಧಿಗೊಳಿಸುವುದು :**

ಕಾರ್ಯಪಾಲಕ ಅಭಿಯಂತರರು, ಕ.ನ.ನೀಸ ಮತ್ತು ಒ.ಚ ಮಂಡಳಿ, ಮೈಸೂರು ಇವರು ಮಾತನಾಡಿ, ಸದರಿ ಕಾಮಗಾರಿಯಲ್ಲಿ 25 ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಬೇಕಾಗಿತ್ತು ಇದರಲ್ಲಿ 24 ನೀರು ಸಂಗ್ರಹಣೆ ಟ್ಯಾಂಕ್‌ಗಳ ಕಾಮಗಾರಿ ಪೂರ್ಣಗೊಂಡಿದೆ ಅದರಲ್ಲಿ 1 ಮಾತ್ರ ಮುಗಿಯುವ ಹಂತದಲ್ಲಿದೆ ಎಂದು ತಿಳಿಸಿದರು. ಮೈಸೂರಿನಲ್ಲಿ 24/7 ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಇದುವರೆವಿಗೆ ಸುಮಾರು 242 ಕಿ.ಮೀ. ಪೈಪನ್ನು ಅಳವಡಿಸಲಾಗಿದ್ದು, ಸುಮಾರು 6700 ಸಂಪರ್ಕಗಳಿಗೆ 24/7 ಚಾಲನೆ ನೀಡಲಾಗಿದೆಂದು ತಿಳಿಸಿದರು. ಈ ಕಾಮಗಾರಿಗಾಗಿ ಅಕ್ಟೋಬರ್–2010 ಅಂತ್ಯಕ್ಕೆ ಸರ್ಕಾರದಿಂದ 92.38 ಕೋಟಿ ಬಿಡುಗಡೆ ಆಗಿದ್ದು, ರೂ. 97.1 ಕೋಟಿ ಖರ್ಚಾಗಿದೆಯೆಂದು ತಿಳಿಸಿದರು. ಪೂರ್ಣ ಯೋಜನೆಯನ್ನು ಡಿಸೆಂಬರ್ 2012 ರ ಒಳಗಾಗಿ ಜಾರಿಗೊಳಿಸಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮಾತನಾಡಿ, ಈ ಹಿಂದೆ 1,17,000 ರಷ್ಟು ಸಂಪರ್ಕಗಳೆಂದು ಅಂದಾಜಿಸಿದ್ದು, ಸರ್ವೆ ನಂತರ 1,76,000 ಸಂಖ್ಯೆ ಸಂಪರ್ಕಗಳು ಅಗತ್ಯವಿದೆ ಎಂದು ತಿಳಿದು ಬಂದಿದ್ದು ಇದಕ್ಕೆ 900 ಕಿಮೀ ಕೊಳವೆ ಮಾರ್ಗದ ಬದಲು 1709 ಕಿಮೀ ಕೊಳವೆ ಮಾರ್ಗ ಅಳವಡಿಸಬೇಕಾಗಿದೆ ಮತ್ತು ಇದರಿಂದ ಅಂದಾಜು ಯೋಜನೆಯ ಮೊತ್ತ ರೂ. 125.00 ಕೋಟಿಗಳಷ್ಟು ಅಧಿಕವಾಗಿ ಬೇಕಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಸಚಿವರು ಮಾತನಾಡಿ ಈ ಯೋಜನೆಗೆ ಮಂಜೂರಾದ ಮೊತ್ತವು ರೂ. 194.5 ಕೋಟಿಗಳಾಗಿದ್ದು, ವರದಿಯಂತೆ ರೂ. 320.00 ಕೋಟಿ ಆಗುವುದಾಗಿ ನಮೂದಿಸಿದ್ದು, ಯಾವ ಕಾರಣಕ್ಕೆ ಈ ಏರಿಕೆ ಮತ್ತು ಇದಕ್ಕೆ ಪಾಲಿಕೆಯ ಒಪ್ಪಿಗೆ ಪಡೆಯಲಾಗಿದೆಯೇ ಎಂದು ಕೇಳಿದರು. ಇದಕ್ಕೆ ಪಾಲಿಕೆಯ ಆಯುಕ್ತರವರು ಮೈಸೂರಿನಲ್ಲಿ ಈ ಕಾಮಗಾರಿಗೆ ವಹಿಸಿದ ಗುತ್ತಿಗೆ ಕರಾರಿನಂತೆ 1 ವರ್ಷ ಯೋಜನೆಯ ಅಧ್ಯಯನಕ್ಕಾಗಿಯೂ ತದ ನಂತರ ಕಾರ್ಯರೂಪಕ್ಕೆ ತರಬೇಕಾಗಿಯೂ ಇದೆ ಎಂದು ತಿಳಿಸಿ ಈ ಅಧ್ಯಯನದಂತೆ ಒಟ್ಟು 790 ಕಿ.ಮೀ ಹೆಚ್ಚುವರಿ ಪೈಪನ್ನು

ಅಳವಡಿಸಬೇಕಾಗಿಯೂ ಮತ್ತು 56 ಸಾವಿರ ಹೆಚ್ಚುವರಿ ಮನೆಗಳಿಗೆ ಸಂಪರ್ಕಗಳನ್ನು ನೀಡಬೇಕಾಗಿರುವುದರಿಂದ ರೂ. 125.00 ಕೋಟಿಗಳು ಹೆಚ್ಚುವರಿ ಮೊತ್ತ ಬೇಕಾಗಿರುತ್ತದೆ ಎಂದು ತಿಳಿಸಿದರು. ಸದರಿ ವರದಿಯು ಆಗಸ್ಟ್-2010 ಮಾಹೆಯಲ್ಲಿ ಲಭ್ಯವಾಗಿದ್ದು, ಈ ಹೆಚ್ಚುವರಿ ಮೊತ್ತ ಭರಿಸುವ ಕಾರಣ ಸರ್ಕಾರದ ಮಟ್ಟದಲ್ಲಿ ಚರ್ಚೆ ಆಗಿದೆ ಎಂದು ತಿಳಿಸಿ ದಿನಾಂಕ 06.04.2009 ರಂದು ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಮತ್ತು ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ ಇವರು ಸಹ ಹಾಜರಿದ್ದ ಸಭೆಯಲ್ಲಿ ಶೇ 50 ರಷ್ಟು ಹಣವನ್ನು ಸರಕಾರದಿಂದ ಮತ್ತು ಶೇ 50 ರಷ್ಟು ಹಣವನ್ನು ಸಾಲ ರೂಪದಲ್ಲಿ ಆರ್ಥಿಕ ಸಂಸ್ಥೆಯಿಂದ ಮಂಡಳಿಯು ಭರಿಸಬಹುದಾಗಿದೆ ಎಂದು ತೀರ್ಮಾನಿಸಿದ್ದು ಈ ಸಾಲವನ್ನು ಪಾಲಿಕೆಗೆ ಬಿಡುಗಡೆ ಮಾಡುವ SFC ಅನುದಾನದ ಅಡಿಯಲ್ಲಿ ಸಂದಾಯ ಮಾಡಬಹುದಾಗಿರುತ್ತದೆ ಎಂದು ತೀರ್ಮಾನಿಸಲಾಗಿದೆಯೆಂದು ಆಯುಕ್ತರು ತಿಳಿಸಿದರು. ಈ ವಿಷಯಕ್ಕೆ ಮಾನ್ಯ ಸಚಿವರು ಸದರಿ ವಿಷಯವನ್ನು ಪಾಲಿಕೆಯ ಕೌನ್ಸಿಲ್ ಮುಂದೆ ತರಲು ತಿಳಿಸಿದರು. ಅನಧಿಕೃತ ಸಂಪರ್ಕದಾರಿಗೂ ಹೊಸ ಜೋಡಣೆಗಳಿಂದ ಸಂಪರ್ಕ ನೀಡಲಾಗುತ್ತಿದೆ ಇದಕ್ಕಾಗಿ ಸಂಪರ್ಕದಾರರು ನೀಡಬೇಕಾದ ಠೇವಣಿಯನ್ನು ನೀರಿನ ಬಿಲ್ಲುಗಳೊಂದಿಗೆ ಸೇರಿಸಲಾಗುತ್ತಿದೆಂದು ಆಯುಕ್ತರು ತಿಳಿಸಿದರು. ಕರಾರಿನಂತೆ ಅಕ್ಟೋಬರ್-2010 ಅಂತ್ಯದವರೆವಿಗೆ 10 ಸಾವಿರ ಸಂಪರ್ಕಗಳನ್ನು 24/7 ವ್ಯವಸ್ಥೆ ಅಡಿಯಲ್ಲಿ ತರಬೇಕಾಗಿತ್ತು ಈ ವರೆವಿಗೆ 6700 ಸಂಪರ್ಕಗಳನ್ನು ತೆರೆಯಲಾಗಿರುತ್ತದೆ ಎಂದು ತಿಳಿಸಿ, 20000 ಸಂಪರ್ಕಗಳನ್ನು ಜನವರಿ 2011ರ ವೇಳೆಗೆ ಮತ್ತು ನಂತರದ ಪ್ರತಿ 6 ತಿಂಗಳಿಗೆ 20000 ಸಂಪರ್ಕಗಳನ್ನು ನೀಡಬೇಕಾಗಿದೆಯೆಂದು ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಮಾತನಾಡಿ ಕಬಿನಿ ಯೋಜನೆಗೆ ಒಟ್ಟು ರೂ. 108.8 ಕೋಟಿಗಳಿಗೆ ಅನುಮೋದನೆ ದೊರೆತ್ತಿದ್ದು, ಈವರೆವಿಗೂ ರೂ. 27.2 ಕೋಟಿ ಹಣ ಬಿಡುಗಡೆಯಾಗಿದ್ದು ರೂ. 45.41 ಕೋಟಿ ವೆಚ್ಚ ಮಾಡಲಾಗಿದೆ ಎಂದು ತಿಳಿಸಿದರು. ಈ ಯೋಜನೆಯಲ್ಲಿ 31.0 ಕಿ.ಮೀ ಎಂ.ಎಸ್. ಕೊಳವೆ ಮಾರ್ಗದಲ್ಲಿ 27.0 ಕಿ.ಮೀ ಕೊಳವೆ ಮಾರ್ಗ ಪೂರ್ಣಗೊಂಡಿದ್ದು, ಈ ಕಾರ್ಯವನ್ನು ಡಿಸೆಂಬರ್-2011ರ ಒಳಗೆ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು. ಕಬಿನಿ ನದಿ ಪಕ್ಕದಲ್ಲಿನ ಮೂಲ ಸ್ಥಾವರಕ್ಕೆ ಮತ್ತು ನೀರು ಶುದ್ಧೀಕರಣ ಘಟಕಕ್ಕೆ ಭೂಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಲಾಗಿದ್ದು, ಇದರಲ್ಲಿ ಸಲ್ಪ ಭಾಗ De-Notification ಆಗಬೇಕಾದ ಕಾರಣ ಸರ್ಕಾರದ ಮಟ್ಟದಲ್ಲಿ ಆದೇಶವಾಗಬೇಕೆಂದು ತಿಳಿಸಿದರು. ಜೊತೆಯಲ್ಲಿ ಕಾಮಗಾರಿಗೆ ಬಿಡುಗಡೆ ಆಗಿರುವ ಮೊತ್ತಕ್ಕಿಂತ ಹೆಚ್ಚು ಮೊತ್ತ ವ್ಯಯವಾಗಿರುವುದರಿಂದ ಹಣ ಬಿಡುಗಡೆಗೆ ಕೋರಿದರು.

ಮಾನ್ಯ ಸಚಿವರು ಯಾವ ಕಾರಣಕ್ಕೆ ಹಣ ಬಿಡುಗಡೆ ಆಗಿಲ್ಲವೆಂದು ಕೇಳಿದ ಮೇರೆಗೆ, ಆಯುಕ್ತರು, ಮಾತನಾಡಿ ಕೇಂದ್ರ ಸರ್ಕಾರಕ್ಕೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಈಗಾಗಲೇ ನೀಡಿದ್ದು, ಹಣ ಬಿಡುಗಡೆ ಆಗಬೇಕೆಂದು, ಆದರೆ ರಾಜ್ಯ ಸರಕಾರದಿಂದ Metropolitan Planning Committee ಮತ್ತು Community Participation Law ಮಾಡಬೇಕಾಗಿದ್ದು, ಇವು ಈ ತನಕ ಆಗದೇ ಇರುವುದರಿಂದ ಬಾರತ ಸರಕಾರವು ವಿವಿಧ ಕಂತುಗಳನ್ನು ಬಿಡುಗಡೆ ಮಾಡಿರುವುದಿಲ್ಲ ಎಂದು ತಿಳಿಸಿದರು. ಲೋಕ ಸಭಾ ಸದಸ್ಯರು ಈ ಕಾಮಗಾರಿಗಳ ಗುಣ ನಿಯಂತ್ರಣಕ್ಕೆ ಮೂರನೇ ವ್ಯಕ್ತಿ ಯಾರನ್ನು ನೇಮಿಸಲಾಗಿದೆಂದು ಕೇಳಿದ ಮೇರೆಗಾಗಿ ಮೆ॥ ಸಿವಿಲ್ ಏಡ್, ಬೆಂಗಳೂರು ಮತ್ತು ಮೆ॥ ಚಂದನ, ಚೆನ್ನೈ ರವರನ್ನು ನೇಮಿಸಲಾಗಿದೆಂದು ಕಾರ್ಯಪಾಲಕ ಇಂಜಿನಿಯರವರು ತಿಳಿಸಿದರು.

**ಘನ ತ್ಯಾಜ್ಯ ವಿಲೇವಾರಿ ಕಾಮಗಾರಿ ಕುರಿತು :**

ಆಯುಕ್ತರು, ಮಹಾನಗರ ಪಾಲಿಕೆಯವರು ಮಾತನಾಡಿ ಈ ಯೋಜನೆ ಅಡಿ ವಿವಿಧ ವಾಹನಗಳ ಖರೀದಿಸಿರುವುದನ್ನು ಮತ್ತು ವಾಹನಗಳಿಗೆ ಜಿಪಿಎಸ್ ಅಳವಡಿಸಿರುವುದನ್ನು ತಿಳಿಸಿದರು. ನಂತರ ನೆಲ ಭರ್ತಿ ಕಾಮಗಾರಿಗೆ ಮತ್ತು ಹಾಲಿ ಇರುವ ಕಸದ ಕ್ಯಾಪಿಂಗ್ ಕಾಮಗಾರಿಗೆ ಕಾರ್ಯಾದೇಶ ನೀಡಿದ್ದು ಪ್ರಾಥಮಿಕ ತಯಾರಿ ಕಾಮಗಾರಿ ನಡೆಯುತ್ತಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು, ಜಿಪಿಎಸ್ ವರದಿಯಿಂದ ಇದುವರೆವಿಗೆ ಏನು ಕ್ರಮ ಕೈಗೊಳ್ಳಲಾಗುತ್ತಿದೆಂದು ಮತ್ತು ಎಲ್ಲಾ ವಾಹನಗಳ ಮೇಲೆಯೂ ಘನ ತ್ಯಾಜ್ಯ ವಿಲೇವಾರಿಯಲ್ಲಿ ವಾಹನಗಳು ಮಾಡುತ್ತಿರುವ ಲೋಪ ತಿಳಿಸಲು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ನಮೂದಿಸುವಂತೆ ತಿಳಿಸಿದರು. ಆಯುಕ್ತರು ಇದಕ್ಕೆ ಕ್ರಮ ವಹಿಸುವುದಾಗಿ ತಿಳಿಸಿದರು.

**ಮೈಸೂರಿನ ಮಳೆ ನೀರು ದೊಡ್ಡ ಚರಂಡಿ ಕಾಮಗಾರಿಗೆ ಕುರಿತಂತೆ :**

ಅಧೀಕ್ಷಕ ಇಂಜಿನಿಯರ್, ನರ್ಮ್ ರವರು ಮಾತನಾಡಿ ಮೈಸೂರು ನಗರದಲ್ಲಿ 6 ದೊಡ್ಡ ಮಳೆ ನೀರು ಚರಂಡಿಗಳಿಗೆ ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರವು ರೂ. 347.24 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಸಧ್ಯಕೆ ರೂ. 100.00 ಕೋಟಿ ACA ನಿಗಧಿಪಡಿಸಿದ ಕಾರಣ ಬನ್ನಿಮಂಟಪ ಮತ್ತು ಹೆಬ್ಬಾಳ್ ಚರಂಡಿಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೆಂದು ತಿಳಿಸಿದರು. ಈವರೆವಿಗೆ ಬಿಡುಗಡೆ ಆಗಿರುವ ರೂ. 31.25 ಕೋಟಿಗಳಿಗೆ ಎದುರಾಗಿ ರೂ. 64.00 ಕೋಟಿಗಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿ ಉಳಿಕೆ ಹಣ ಬಿಡುಗಡೆಯಾದರೆ ಶೀಘ್ರವಾಗಿ ಕೆಲಸ ಪೂರ್ಣಗೊಳಿಸುವುದಾಗಿ ತಿಳಿಸಿದರು. ಮಾನ್ಯ ಸಚಿವರು ಹಣ ಬಿಡುಗಡೆಗೆ ಕೂಡಲೇ ಸರ್ಕಾರವನ್ನು ಪ್ರಸ್ತಾಪಿಸುವುದಕ್ಕೆ ತಿಳಿಸಿದರು. ಇದಕ್ಕಾಗಿ ಮಾನ್ಯ ಲೋಕ ಸಭಾ ಸದಸ್ಯರೊಂದಿಗೆ ನವೆಂಬರ್ 15ರ ನಂತರ ಒಂದು ನಿಯೋಗವನ್ನು ಕೊಂಡೊಯ್ದು ದೆಹಲಿಗೆ ಮಾನ್ಯ ಭಾರತ ಸರಕಾರದ ನಗರಾಭಿವೃದ್ಧಿ ಸಚಿವರನ್ನು ಭೇಟಿ ಮಾಡುವುದು ಅವಶ್ಯಕ ಎಂದು ಸೂಚಿಸಿದರು.

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಾಮಗಾರಿ :**

ರಿಂಗ್ ರೋಡ್ ಬಗ್ಗೆ ವಿವರ ಕೇಳಿದ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಈಗಾಗಲೇ ಸಾಕಷ್ಟು ನಿಧಾನವಾಗಿ ಕೆಲಸ ನಡೆಯುತ್ತಿದೆ, ಇದರ ಬಗ್ಗೆ ವಿವರವಾಗಿ ಮತ್ತೊಮ್ಮೆ ಚರ್ಚಿಸೋಣ ಎಂದು ತಿಳಿಸಿದರು.

**ಕೆ.ಎಸ್.ಆರ್.ಟಿ.ಸಿ. ಕಾಮಗಾರಿಗಳು :**

ಕೆಎಸ್ಆರ್‌ಟಿಸಿ ವಾಹನ ನಿಲ್ದಾಣಗಳ ಬಗ್ಗೆ ವಿವರ ಕೇಳಿದಾಗ, ವಿಭಾಗೀಯ ನಿಯಂತ್ರಕರು ಗ್ರಾಮಾಂತರ ಮಾತನಾಡಿ, ಮುಖ್ಯ ಬಸ್ ನಿಲ್ದಾಣ, ನಾಯ್ಡುನಗರ, ನಗರಪಾಲಿಕೆ ಬಸ್ ನಿಲ್ದಾಣ ಕಾಮಗಾರಿ ಪೂರ್ತಿಯಾಗಿ ಈ ಮೂರರಲ್ಲಿ ವಾಹನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿ ಸಾತಗಳ್ಳಿ ಬಸ್‌ನಿಲ್ದಾಣದ ಮೇಲ್ಛಾವಣೆ ಕಾಮಗಾರಿ ಪೂರ್ತಿಗೊಂಡು, ರಸ್ತೆ ಕೆಲಸ ಮತ್ತು ಇತರೆ ಕೆಲಸಗಳು ಪ್ರಗತಿಯಲ್ಲಿವೆ, ಇಲವಾಲ ಬಸ್ ನಿಲ್ದಾಣದ ಮೇಲ್ಛಾವಣೆ ಕೆಲಸ ಪೂರ್ತಿಗೊಂಡಿದ್ದು, ಗ್ರಾನೈಟ್ ಕೆಲಸ ಮತ್ತು ರಸ್ತೆ ಕೆಲಸ ಪ್ರಗತಿಯಲ್ಲಿದೆಯೆಂದು ಹಾಗೂ ಚಾಮುಂಡಿ ಬೆಟ್ಟದ ಬಸ್ ನಿಲ್ದಾಣ ಕಾಲಂ ಕೆಲಸಗಳು ಪೂರ್ತಿಯಾಗಿ, ಮೇಲ್ಛಾವಣಿ ಕೆಲಸ ಪ್ರಗತಿಯಲ್ಲಿದೆ, ಮಾರ್ಚ್ 2011 ರ ಹೊತ್ತಿಗೆ ಪೂರ್ತಿಯಾಗುವುದೆಂದು ತಿಳಿಸಲಾಯಿತು.

ಹಾಗೂ ಪ್ಯಾಲೆಸ್ ಬೋರ್ಡ್ ಅಧೀನದಲ್ಲಿರುವ ನಗರ ಬಸ್ ನಿಲ್ದಾಣದ ಪಕ್ಕದಲ್ಲಿರುವ 1 ಎಕರೆ 10 ಗುಂಟೆ ಜಮೀನನ್ನು ವಹಿಸಿಕೊಟ್ಟರೆ ಉಳಿದ ನಗರ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಒಂದು ಮನವಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಲು ಸೂಚಿಸಲಾಯಿತು.

**ಪಾರಂಪರಿಕ ಪ್ರದೇಶದ ಅಭಿವೃದ್ಧಿ ಕುರಿತು :**

ಆಯುಕ್ತರು ಮಹಾನಗರ ಪಾಲಿಕೆಯವರು ಮಾತನಾಡಿ, ಈ ಬಗ್ಗೆ 39.45 ಕೋಟಿ ಮೊತ್ತದ ಕಾಮಗಾರಿಯು ಅನುಮೋದನೆಗೊಂಡಿದ್ದು ಇದರಲ್ಲಿ ಅರಮನೆ ಸುತ್ತಲಿನ ರಸ್ತೆ ಅಭಿವೃದ್ಧಿ, ಟೌನ್‌ಹಾಲ್ ಒಳ ಭಾಗದ ಅಭಿವೃದ್ಧಿ, ಟೌನ್‌ಹಾಲ್ ಬಳಿಯಲ್ಲಿ 370 ಕಾರುಗಳ ನಿಲ್ದಾಣಕ್ಕಾಗಿ ಕೆಳ ಹಂತದಲ್ಲಿನ ಕಟ್ಟಡ ನಿರ್ಮಿಸುವುದು, ಜನರು ಕೂರುವಂತಹ ಹವಾನಿಯಂತ್ರಣ ಥಿಯೇಟರ್ ನಿರ್ಮಾಣವು ಮತ್ತು ಉಳಿದ ಭಾಗದಲ್ಲಿ ಉದ್ಯಾನವನ ಅಭಿವೃದ್ಧಿಗೊಳಿಸುವುದು ಜೊತೆಯಲ್ಲಿ ಮೈಸೂರಿನ 20 ಕಡೆಯಲ್ಲಿ ಟಾಂಗ್ ನಿಲ್ದಾಣ ನಿರ್ಮಿಸುವುದಾಗಿ ತಿಳಿಸಿದರು. ಈ ಕಾಮಗಾರಿಗೆ ಟೆಂಡರ್ ತೆರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದು, ಡಿಸೆಂಬರ್–2010ರ ಅಂತ್ಯಕ್ಕೆ ಕೆಲಸ ಪ್ರಾರಂಭಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲಾಧಿಕಾರಿಗಳನ್ನು ವಿಶೇಷ ಅಧಿಕಾರಿ ಎಂದು ನೇಮಿಸ ಆದೇಶ ಹೊರಡಿಸಿದ್ದರು. ಅದಕ್ಕೆ ಯಾವ ರೀತಿಯ ಒಂದು ಸ್ಪಷ್ಟತೆವಿಲ್ಲವಾಗಿತ್ತು. ಅದಕ್ಕಾಗಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು Executive Committee ಮಾಡಲು ಪ್ರಸ್ತಾವನೆಯನ್ನು SLNA ಗೆ ಕಳುಹಿಸಿದ್ದು, SLNA ರವರು ಜಿಲ್ಲಾ ಉಸ್ತುವಾರಿ ಸಚಿವರ ನೇತ್ರತ್ವದಲ್ಲಿ ಇರುವ ಕಮಿಟಿ ಮುಂದೆ ಪ್ರಸ್ತಾಪಿಸಲು ತಿಳಿಸಿದ್ದಾರೆ. ಅದರಂತೆ ಸದರಿ Executive Committee ಯನ್ನು ಅಸ್ತಿತ್ವದಲ್ಲಿ ತರಲು ಪ್ರಸ್ತಾವನೆಯನ್ನು ಮಂಡಿಸಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ, ವಿವರವಾಗಿ ಚರ್ಚಿಸಲಾಗಿ, ಈ ಸಂಬಂಧ ಒಂದು Official Executive Committee ಯನ್ನು ರಚಿಸುವುದು ಸೂಕ್ತವಾಗಿದೆ ಎಂದು ತೀರ್ಮಾನಿಸಲಾಯಿತು. ಈ Official Executive Committee ಒಂದು ತಿಂಗಳಿಗೊಂದರಂತೆ ಸಭೆಯನ್ನು ನಡೆಸಿ, ಸರ್ಕಾರಕ್ಕೆ ಸಲ್ಲಿಸಬೇಕಾದ ಯಾವುದೇ ಸಮಸ್ಯೆ ಎದುರಾದರೂ ಈ ಕಮಿಟಿಯ ಸದಸ್ಯರಾದ ಯಾವುದೇ ಇಲಾಖೆಯ ಅಧಿಕಾರಿಗಳು ಈ ಕಮಿಟಿಯಲ್ಲಿ ಚರ್ಚಿಸಿ, ಪ್ರಸ್ತಾವನೆಗಳನ್ನು ಸರಕಾರಕ್ಕೆ ಅಥವಾ ಸಂಬಂಧಪಟ್ಟ ಇಲಾಖೆಗೆ ಈ ಕಮಿಟಿಯ ನಡವಳಿಯೊಂದಿಗೆ ಕಳುಹಿಸಲು ತೀರ್ಮಾನಿಸಲಾಗಿರುತ್ತದೆ.

| | |
|---|---|
| Special Officer | Deputy Commissioner |
| Commissioner | Mysore City Corporation |
| Commissioner | MUDA |
| Supdt. Engineer | JnNurm, MCC |
| Supdt. Engineer | MUDA |
| KSRTC | Divisional Controller |
| KUWS & DB | Executive Engineer |
| KSCB | Executive Engineer |
| Tourism | Assistant Director |

ಕೊಳಗೇರಿಗಳ ಅಭಿವೃದ್ಧಿ ಬಗ್ಗೆ ಪ್ರತ್ಯೇಕವಾದ ಸಭೆಯನ್ನು ಏರ್ಪಡಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದರು.

ಈಗ ಕಾಮಗಾರಿಗಳಿಗೆ ಬೇಕಾದ ಹಾಗೂ ಬಿಡುಗಡೆಯಾಗಬೇಕಾಗಿರುವ ಉಳಿಕೆ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಿಸಲು ಪ್ರಯತ್ನ ಮಾಡೋಣ ಎಂದು ತಿಳಿಸಿದರು.

ಮುಂದಿನ ಸಭೆ ನಡೆಸುವ ಮೊದಲು ಯೋಜನಾ ಸ್ಥಳಗಳಿಗೆ ಭೇಟಿನೀಡಿ ನಂತರ ಸಭೆ ನಡೆಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಎಸ್.ಎ. ರಾಮದಾಸ್
ವೈದ್ಯಕೀಯ ಶಿಕ್ಷಣ ಸಚಿವರು
ಮತ್ತು ಜಿಲ್ಲಾ ಉಸ್ತುವಾರಿ ಸಚಿವರು